# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಶನಿವಾರ, ೧೭, ಜನವರಿ, ೨೦೨೬(ಪುಷ್ಯ, ೨೭, ಶಕವರ್ಷ, ೧೯೪೭)<br>BENGALURU, SATURDAY, 17, JANUARY, 2026(PUSHYA , 27, SHAKAVARSHA, 1947) | ನಂ. ೬೮<br>No.68 |
|---|---|---|


**ಕರ್ನಾಟಕ ಸರ್ಕಾರ**

**ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ**

**ನಂ.204, 2ನೇ ಮಹಡಿ, 3ನೇ ಗೇಟ್,**
**ಬಹುಮಹಡಿಗಳ ಕಟ್ಟಡ,**
**ಬೆಂಗಳೂರು-560001**

ಸಂಖ್ಯೆ: ಕಪಂರಾಸೀನಿಆ/85/ಪ್ರಾ.ಗ.ನಿ/2023 ದಿನಾಂಕ:17-01-2026

## ಪ್ರಕಟಣೆ

**ಯಾದಗಿರಿ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತು.**

ನಗರಾಭಿವೃದ್ಧಿ ಇಲಾಖೆಯು, ಯಾದಗಿರಿ ಜಿಲ್ಲೆಯ, ಶಹಾಪೂರ ತಾಲ್ಲೂಕಿನ ಕೆಲವು ಗ್ರಾಮೀಣ ಪ್ರದೇಶಗಳನ್ನು ನಗರ ಸಂಸ್ಥೆಗಳನ್ನಾಗಿ ಪರಿವರ್ತಿಸಿ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ, ಈಗಾಗಲೇ ದಿನಾಂಕ:16-12-2023ರಲ್ಲಿ ಅಧಿಸೂಚಿಸಿ ಹೊರಡಿಸಿರುವ ಶಹಾಪೂರ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಯಿಂದ ಪರಿವರ್ತನೆಗೊಂಡಿರುವ ಗ್ರಾಮೀಣ ಪ್ರದೇಶಗಳನ್ನು ಕೈಬಿಡಬೇಕಾಗಿರುತ್ತದೆ. ಆದ್ದರಿಂದ, ಸರ್ಕಾರವು, ದಿನಾಂಕ:06-01-2026 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಶಹಾಪೂರ ತಾಲ್ಲೂಕಿನ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು ಹಿಂಪಡೆದಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಶಹಾಪೂರ ತಾಲ್ಲೂಕಿನ ಪರಿಷ್ಕೃತ ಸದಸ್ಯರ ಸಂಖೆ ಯನ್ನು ಹಾಗೂ ಸೀಮಾ/ಗಡಿಗಳನ್ನು ನಿಯಮಾನುಸಾರ ರಚಿಸಬೇಕಾಗಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 160, 161 ಮತ್ತು 163ರ ಅನ್ವಯ ಹಾಗೂ 308 (ಎಫ್)ರ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ , ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಯಾದಗಿರಿ ಜಿಲ್ಲೆಯ, ಶಹಾಪೂರ ತಾಲ್ಲೂಕಿನ **ಜಿಲ್ಲಾ ಪಂಚಾಯತಿ** ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಟಕ **'ಅ'** ದಲ್ಲಿರುವಂತೆ ನಿಗದಿಪಡಿಸಿದೆ. '**ಅ**' ಕೋಷ್ಟಕದ **2ನೇ** ಅಂಕಣದಲ್ಲಿರುವ ತಾಲ್ಲೂಕಿನಿಂದ ಆಯ್ಕೆಯಾಗುವ ಜಿಲ್ಲಾ ಪಂಚಾಯತಿ ಸದಸ್ಯರುಗಳ ಸಂಖ್ಯೆಯನ್ನು **3ನೇ** ಅಂಕಣದಲ್ಲಿ ನಿಗದಿಪಡಿಸಿದೆ.

ಯಾದಗಿರಿ ಜಿಲ್ಲೆಯ, ಶಹಾಪೂರ ತಾಲ್ಲೂಕಿನ ಜಿಲ್ಲಾ ಪಂಚಾಯತಿ ವ್ಯಾಪ್ತಿಯೊಳಗಿರುವ ಪ್ರದೇಶಗಳನ್ನು **5** ಏಕ ಸದಸ್ಯ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಅವುಗಳ ಸೀಮಾ/ಗಡಿಯನ್ನು ಕೋಷ್ಟಕ **'ಆ'** ದಲ್ಲಿರುವಂತೆ ನಿರ್ಣಯಿಸಿದೆ. **ಆ'** ಕೋಷ್ಟಕದ **3ನೇ** ಅಂಕಣದಲ್ಲಿ ಪ್ರತಿಯೊಂದು ಜಿಲ್ಲಾ ಪಂಚಾಯತ್ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರನ್ನು ಮತ್ತು ಕೋಷ್ಟಕದ **4ನೇ** ಅಂಕಣದಲ್ಲಿ ನಮೂದಿಸಿರುವ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಆ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯೆಂದು ನಿಗದಿಪಡಿಸಿದೆ.

ಯಾದಗಿರಿ ಜಿಲ್ಲೆಯ, ಶಹಾಪೂರ ತಾಲ್ಲೂಕಿನ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ **7 (ಏಳು) ದಿವಸಗಳ ಒಳಗಾಗಿ ಅಂದರೆ ದಿನಾಂಕ:23-01-2026 ಸಂಜೆ 5.00 ಗಂಟೆಯ ಒಳಗೆ** ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಹಾಗೂ ಖುದ್ದಾಗಿ/ಅಂಚೆಯ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಆಯೋಗವು ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಆಯೋಗವು ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

**(ಅ) ಆನ್ ಲೈನ್ ಮೂಲಕ:**

**ವೆಬ್ ಸೈಟ್ ವಿಳಾಸ: "https://rdpr.karnataka.gov.in/rdc/public/"** ಸದರಿ ವೆಬ್‌ಸೈಟ್ ನ ಮುಖಪುಟದ ಎಡಭಾಗದಲ್ಲಿರುವ ಸಾರ್ವಜನಿಕ ಸಲಹೆಗಳು ಎಂಬ ಶೀರ್ಷಿಕೆಯನ್ನು CLICK ಮಾಡಿ ತಮ್ಮ ಆಕ್ಷೇಪಣೆಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಬಹುದು.

**(ಆ) ಖುದ್ದಾಗಿ/ಅಂಚೆ ಮೂಲಕ:**

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ.
3ನೇ ಗೇಟ್, 2ನೇ ಮಹಡಿ, ಕೊಠಡಿ ಸಂಖ್ಯೆ: 222/A, ಬಹುಮಹಡಿ ಕಟ್ಟಡ,
ಅಂಬೇಡ್ಕರ್ ವೀಧಿ, ಬೆಂಗಳೂರು-560001.

**ಕೋಷ್ಟಕ "ಅ"**

| ಯಾದಗಿರಿ ಜಿಲ್ಲೆ | | |
|---|---|---|
| **ಕ್ರ. ಸಂ.** | **ತಾಲ್ಲೂಕಿನ ಹೆಸರು** | **ಜಿಲ್ಲಾ ಪಂಚಾಯತಿಯ ಸದಸ್ಯರ ಸಂಖ್ಯೆ** |
| 1 | 2 | 3 |
| | **ಶಹಾಪೂರ** | 5 |

**ಕೋಷ್ಟಕ "ಆ"**

| ಯಾದಗಿರಿ ಜಿಲ್ಲೆ | | | |
|---|---|---|---|
| **ಕ್ರ ಸಂ** | **ತಾಲ್ಲೂಕಿನ ಹೆಸರು** | **ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು** | **ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು** |
| 1 | 2 | 3 | 4 |
| 1 | **ಶಹಾಪೂರ** | 11-ವನದುರ್ಗಾ | ವನದುರ್ಗಾ, ಚೆನ್ನೂರ(ಕೆ), ಕಕ್ಕಸಗೇರಾ, ಬೂದನೂರ, ಬೋವಿಕಾಡಮಗೇರಾ, ಆಲ್ದಾಳ, ಚಾಮನಾಳ, ಚಂದಾಪೂರ, ದರ್ಶನಾಪೂರ, ಗುಂಡಾಪೂರ, ನಡಿಹಾಳ, ಉಕ್ಕಿನಾಳ, ಹಾರಣಗೇರಾ, ರಬ್ಬನಹಳ್ಳಿ, ಕರಕಿಹಳ್ಳಿ. |
| 2 | **ಶಹಾಪೂರ** | 12-ಸಗರ | ಸಗರ, ಹೊಸಕೇರಾ, ಶೆಟ್ಟಿಕೇರಾ, ರಾಜಾಪೂರ(ಬಿ), ಮಹಲರೋಜಾ,ನಾಗನಟಗಿ, ಗಂಗನಾಳ,ಬಾಣತಿಹಾಳ, ಸೈದಾಪೂರ, ಉಮರದೊಡ್ಡಿ, ದರಿಯಾಪೂರ. |
| 3 | **ಶಹಾಪೂರ** | 13-ರಸ್ತಾಪೂರ | ರಸ್ತಾಪೂರ,ಶಾರದಹಳ್ಳಿ, ವಿಭೂತಿಹಳ್ಳಿ, ಕನ್ಯಾಕೊಳ್ಳೂರು, ತಿಪ್ಪನಳ್ಳಿ, ಬೆನಕಹಳ್ಳಿ(ಜೆ), ನಂದಿಹಳ್ಳಿ(ಕೆ)(ಡಿ), ಹತ್ತಿಗೂಡುರ, ಕೊಂಗಂಡಿ ಎಸ್. ಆರ್, ಮಂಡಗಳ್ಳಿ, ಕೊಳ್ಳೂರು, ಟೋಣ್ಣೂರ, ಗೌಡುರ, ಮರಕಲ, ಚಂದ್ರಾಳ(ಡಿ), ಬೀರನೂರ, ಕಾಟಮನಹಳ್ಳಿ, ಸಾವೂರ, ನಂದಿಹಳ್ಳಿ(ಜೆ), ಪರಸಾಪೂರ. |
| 4 | **ಶಹಾಪೂರ** | 14-ಶಿರವಾಳ | ಶಿರವಾಳ, ಅಣಬಿ, ರೋಜಾ ಎಸ್.ಶಿರವಾಳ, ಇಟಗಾ ಎಸ್.ಶಿರವಾಳ, ಹಂದ್ರಾಳ(ಡಿ), ಇಬ್ರಾಹಿಂಪೂರ, ತಂಗಡಗಿ, ಹುರಸಗುಂಡಗಿ, ಬಿದರಾಣಿ, ಹಬ್ಬಳ್ಳಿ, ಖಾನಾಪೂರ, ಗುಂಡಳ್ಳಿ, ಮನಗನಾಳ, ಚಟ್ನಳ್ಳಿ, ನಾಲವಡಗಿ, ಕರಣಗಿ, ಬಲಕಲ್, ಮರಮಕಲ್, ಮೂಡಬೂಳ, ಅರಳಹಳ್ಳಿ, ಸಲಾದಪೂರ, ಬಿಲ್ಹಾಡ(ಡಿ). |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ಯಾದಗಿರಿ ಜಿಲ್ಲೆ | | | |
|---|---|---|---|
| ಕ್ರ ಸಂ | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 | 4 |
| 5 | **ಶಹಾಪೂರ** | 15-ಗೋಗಿ(ಕೆ) | ಗೋಗಿ(ಕೆ), ಗೋಗಿಪೇಠ, ನೆಗ್ಗಿನಾಳ(ಡಿ), ಮದ್ದರಕಿ, ಕೊಡಮನಳ್ಳಿ, ಸಾದ್ಯಾಪೂರ, ಸಿಂಗನಹಳ್ಳಿ, ಇಂಗನಾಳ(ಡಿ), ಹೋತಪೇಠ, ಹಾಲಬಾವಿ, ಮಕ್ತಾಪೂರ, ದಿಗ್ಗಿ, ಇಂಗಳಗಿ, ಮಡ್ನಾಳ, ರಾಜಾಪೂರ(ಕೆ)(ಡಿ). |
| 6 | **ಶಹಾಪೂರ** | 16- | ನಗರಾಭಿವೃದ್ಧಿ ಇಲಾಖೆಯು, ಯಾದಗಿರಿ ಜಿಲ್ಲೆಯ, ಶಹಾಪೂರ ತಾಲ್ಲೂಕಿನ ಕೆಲವು ಗ್ರಾಮೀಣ ಪ್ರದೇಶಗಳನ್ನು ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಪರಿವರ್ತಿಸಿರುವ ಹಿನ್ನೆಲೆಯಲ್ಲಿ, ಸರ್ಕಾರವು ದಿನಾಂಕ:16-12-2023ರಂದು ಪ್ರಕಟಿಸಿದ್ದ ಅಧಿಸೂಚನೆಯಲ್ಲಿನ ಶಹಾಪೂರ ತಾಲ್ಲೂಕಿನ 16ನೇ ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನು ಕೈಬಿಡಲಾಗಿದೆ. |

**ವಿಶೇಷ ಸೂಚನೆ:-**

**ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತಂತೆ, ದಿನಾಂಕ:23-01-2026ರ ಒಳಗಾಗಿ ಸಲ್ಲಿಸಲ್ಪಟ್ಟ ಆಕ್ಷೇಪಣೆ/ಅಹವಾಲುಗಳ ಪರಿಶೀಲನಾ ಅದಾಲತ್ ಅನ್ನು ದಿನಾಂಕ:27-01-2026 ರಂದು ಬೆಳಿಗ್ಗೆ10:30 ರಿಂದ ಮಧ್ಯಾಹ್ನ 1:30 ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್-ನಂ-2, 2ನೇ ಮಹಡಿ, ಕೊಠಡಿ ಸಂಖ್ಯೆ:229, 230 ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಇಲ್ಲಿ ನಡೆಸಲಾಗುವುದು. ಆಕ್ಷೇಪಣೆ ಮತು ಅಹವಾಲುಗಳನ್ನು ಸಲ್ಲಿಸಿರುವವರು ಅದಾಲತ್ ನಲ್ಲಿ ಭಾಗವಹಿಸಲು ಇಚ್ಛಿಸಿದಲ್ಲಿ, ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯ ಮೂಲ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು.**

**(ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಹಾಗೂ ಸದಸ್ಯ ಕಾರ್ಯದರ್ಶಿ
ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH